# ಪೂರ್ಣಪ್ರಜ್ಞರು
## (೧೨೩೮-೧೩೧೭ A.D)

ಶ್ರೀಮದಾನಂದತೀರ್ಥ, ಪೂರ್ಣಪ್ರಜ್ಞ, ಪೂರ್ಣಬೋಧ, ಮಧ್ವಾಚಾರ್ಯ ಇತ್ಯಾದ್ಯನೇಕ ನಾಮಧೇಯಗಳಿಂದ ೧೩-೧೪ ನೆಯ ಶತಮಾನದಲ್ಲಿದ್ದು ಪ್ರಸಿದ್ಧರಾದ ಇವರು ಮಾನವ ದೃಷ್ಟಿಗೆ ಅಗೋಚರರಾಗಿ ಇದೇ ಸಾಧಾರಣ ಸಂವತ್ಸರ ಮಾಘ ಶುದ್ಧ ನವಮಿಗೆ ೬೮೪ ವರ್ಷಗಳು ಮುಗಿಯುತ್ತವೆ. ಜನ್ಮಾದಾರಭ್ಯ ಇವರು ೭೯ ವರ್ಷ ಆಗಿದ್ದು ಜನಾಂಗಕ್ಕೆ ಗೋಚರರಾಗಿದ್ದರು. ಈ ಅವಧಿಯಲ್ಲಿ ಇವರು ಶೈಶವಾವಸ್ಥೆಯಿಂದ ಅದೃಶ್ಯರಾಗುವವರೆಗೆ ಮಾಡಿದ ಸಕಲ ವ್ಯಾಪಾರಗಳು ಮತ್ತು ಬರೆದ ಗ್ರಂಥಗಳೂ ವಿಪುಲ ವೈಶಿಷ್ಟ್ಯವನ್ನು ಹೊಂದಿವೆ.

ಶ್ರೀಮದಾಚಾರ್ಯರ ಚರಿತ್ರೆಯ ಬಗ್ಗೆ ನಮಗೆ ದೊರೆಯತಕ್ಕ ಪ್ರಮಾಣಭೂತ ಆಕರ ಗ್ರಂಥಗಳೆಂದರೆ ಶ್ರೀಮದ್ಧರಿವಾಯುಸ್ತುತಿ, ಮಣಿಮಂಜರಿ, ಸುಮಧ್ವವಿಜಯ ಮತ್ತು ಭಾವಪ್ರಕಾಶಿಕೆ. ಇವುಗಳಲ್ಲಿ ಮೊದಲನೆಯದು ಶ್ರೀ ತ್ರಿವಿಕ್ರಮಪಂಡಿತಾಚಾರ್ಯರಿಂದ ರಚಿಸಲ್ಪಟ್ಟಿದ್ದು ಉಳಿದ ಮೂರು, ಅವರ ಮೂರನೆಯ ಮಕ್ಕಳಾದ ಶ್ರೀ ನಾರಾಯಣ ಪಂಡಿತಾಚಾರ್ಯರಿಂದ ರಚಿತವಾದವುಗಳು. ಇವುಗಳಲ್ಲಿ ಸುಮಧ್ವವಿಜಯ ಗ್ರಂಥವು ಬಹಳ ವಿಸ್ತಾರವಾದದ್ದು.

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಶ್ರೀಮಧ್ವಾಚಾರ್ಯರ ಸಮಕಾಲೀನರು. ಶ್ರೀ ನಾರಾಯಣ ಪಂಡಿತಾಚಾರ್ಯರು ಆಗ ಇದ್ದರೂ ಪ್ರೌಢರಾಗಿರಲಿಲ್ಲವೆಂದು ತಿಳಿದು ಬರುತ್ತದೆ. ಶ್ರೀಮದಾಚಾರ್ಯರು ಅದೃಶ್ಯರಾದವೇಳೆಗೂ ಸುಮಧ್ವವಿಜಯವು ರಚನೆಯಾದ ವೇಳೆಗೂ ಬಹಳ ಅಂತರವಿದ್ದಂತೆ ಕಾಣಬರುತ್ತಿಲ್ಲ. ಆದ್ದರಿಂದ ಉತ್ಪ್ರೇಕ್ಷಾರಹಿತವಾದ ಸತ್ಯಸಂಗತಿಗಳ ಅನ್ವೇಷಣೆಗೆ ಮತ್ತು ಸಂಗ್ರಹಣೆಗೆ ಸಾಕಷ್ಟು ಅವಕಾಶವಿದ್ದಿತು.

ಅಷ್ಟೇ ಅಲ್ಲದೇ ಶ್ರೀ ನಾರಾಯಣಪಂಡಿತಾಚಾರ್ಯರು ಭಾವಪ್ರಕಾಶಿಕೆಯಲ್ಲಿ ನಿರೂಪಿಸಿರುವಂತೆ ಅವರು ವಿಷಯ ಸಂಗ್ರಹಣೆ ಮಾಡಿದ ರೀತಿಯನ್ನು ನೋಡಿದರೆ, ಬಹಳವಾಗಿ ಶೋಧಿಸಿ ಸಂಶೋಧಕನ ದೃಷ್ಟಿಯಿಂದ ಕಾವ್ಯ ರಚನೆ ಮಾಡಿದ್ದಾರೆ. ಅವರು ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಿಂದಲೂ ಮತ್ತು ಅವರನ್ನು ನೋಡಿದವರಿಂದಲೂ ವಿಷಯ ಸಂಗ್ರಹ ಮಾಡಿದ್ದಾರೆ. ಬಹು ಪ್ರಮಾಣ ಸಂವಾದದಿಂದ ಸಂಶಯ ನಿವಾರಣೆ, ದುರ್ಬಲ ಸಂಗತಿಗಳ ವ್ಯಾವೃತ್ತಿ, ಅವಸರದಿಂದ ಯಾವದೇ ನಿಶ್ಚಯಕ್ಕೆ ಬರದಿರುವುದು ಮತ್ತು ದಾರ್ಢ್ಯ ಹೇತುಗಳಿಂದ ನಿರ್ಣಯ ಇವೇ ಮೊದಲಾದ ಅತ್ಯಂತ ಉಚಿತ ಕ್ರಮಗಳನ್ನು ಅನುಸರಿಸಿ ಕ್ರಮವಹಿಸಿ ಸುಮಧ್ವವಿಜಯಕ್ಕೆ ಕಥಾವಸ್ತು ಸಂಗ್ರಹಿಸಿ ಕಾವ್ಯ ರಚನೆ ಮಾಡಿದ್ದಾರೆ. ಅವರ ವಿಮರ್ಶಾಕ್ರಮವನ್ನು ಭಾವದೀಪಿಕೆಯ ಕೆಳಗಿನ ಶ್ಲೋಕಗಳಿಂದ ತಿಳಿಯಬಹುದು.

“ಪ್ರಾಯೇಣನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ।
ಮಯಾದೃಷ್ಟಾಧ್ರುವಮಿತಿ ಪ್ರೋಕ್ತಾಃ ಪ್ರಾಯೇಣ ಪುರುಷೈಃ॥
ದ್ವಯೋರ್ವಕ್ರೋರ್ವಿರೋಧೇತು ಸ್ವೀಕೃತಾ ಪ್ರಬಲಸ್ಯಗೀ॥

(ಭಾ.ಪ್ರ) (ನಾ.ಪಂ)

ಆಧುನಿಕ ಸಂಶೋಧಕರೂ ಶೋಧನೆ (Research) ನಡೆಸಿರುವ ಕ್ರಮವು ಇದೇ ಮಾರ್ಗವನ್ನನುಸರಿಸಿತಾನೇ. ವಸ್ತುಸ್ಥಿತಿ ಹೀಗಿರುವಾಗ ಕೇವಲ ಭಕ್ತಿ ಭಾವದಲ್ಲಿ ಮೈತಳೆದ ಗ್ರಂಥವಿದೆಂದೂ ಇದರಲ್ಲಿ ಅತಿಶಯೋಕ್ತಿಗಳಿವೆ ಯೆಂದೂ ಹೇಗೆ ಹೇಳುವದು.

ಯೊ ಹಿ ಯತ್ರಾದರವಾನ್ ತಸ್ಯೈವ

ದತ್ವಸ್ತು ವಿದ್ಯಾಮಾನಮಪಿ ಸ್ಫುರತಿ॥

ಎಂಬದು ಸಾಮಾನ್ಯ ನಿಯಮ, ಶ್ರೀ ಟೀಕಾರಾಯರ ಉಕ್ತಿ. ಶ್ರೀ ನಾರಾಯಣಪಂಡಿತಾಚಾರ್ಯರಿಗೆ ಶ್ರೀಮದಾಚಾರ್ಯರಲ್ಲಿ ಅತ್ಯಂತ ಗೌರವ, ಪರಮಾದರ ಮತ್ತು ಅತಿಶಯ ಭಕ್ತಿ ಇವೆಲ್ಲವುಗಳೂ ಇಲ್ಲದಿದ್ದರೆ ಅವರು ಈ ಕೃತಿರಚನೆಗೆ ಕೈಹಾಕುತ್ತಲೇ ಇರಲಿಲ್ಲ. ಶ್ರೀ ನಾರಾಯಣಪಂಡಿತಾಚಾರ್ಯರ ಮನೋಧರ್ಮವನ್ನು ಸರಿಯಾದ ಹಿನ್ನೆಲೆಯಲ್ಲಿ ನೋಡಿದರೆ ಸುಮಧ್ವವಿಜಯದ ಸಂಗತಿಗಳನ್ನು ಕುಟಿಲ ದೃಷ್ಟಿಯಿಂದ ನೋಡಲು ಅವಕಾಶವೇ ಇಲ್ಲ.

ಇದೆಲ್ಲದರ ಜೊತೆಗೆ ಶ್ರೀ ನಾರಾಯಣಪಂಡಿತಾಚಾರ್ಯರಲ್ಲಿ ಇನ್ನೊಂದು ಅಸಾಧಾರಣ ಗುಣವಿದೆ. ಏನೆಂದರೆ ಅವರು ಶ್ರೇಷ್ಠ ಕವಿ. ಶ್ರೀಮದಾಚಾರ್ಯರ ಚರಿತ್ರೆಯನ್ನು ಉತ್ತಮೋತ್ತಮ ರೀತಿಯಲ್ಲಿ ವರ್ಣಿಸಿದ್ದಾರೆ. ಶ್ರೀಮದಾಚಾರ್ಯರ ಕೀರ್ತಿಯನ್ನು ಹೊಗಳತಕ್ಕ ಈ ಅಮೂಲ್ಯ ಮಹಾ ಕಾವ್ಯಕ್ಕೆ ಆಗಿದ್ದ ಮತ್ತು ಮುಂದೆ ಬಂದ ಪಂಡಿತರು ತಲೆದೂಗಿದ್ದಾರೆ. ಮುಂದಿ ನವರೂ ಹಾಗೆಯೇ ಮಾಡುವರು.

ಇಲ್ಲಿ ಗಮನಾರ್ಹ ಸಂಗತಿ ಏನೆಂದರೆ ಶ್ರೀ ನಾರಾಯಣಪಂಡಿತರು ಸುಮಧ್ವವಿಜಯ ಕಾವ್ಯ ರಚನೆ ಮಾಡಿದ ಮೇಲೆ ಶ್ರೀ ಮಧ್ವಾಚಾರ್ಯರ ಅನೇಕ ಪರಂಪರಾ ಶಿಷ್ಯರೂ, ಯತಿವರ್ಯರೂ, ಉತ್ತಮ ಕವಿಗಳೂ, ಟೀಕಾಕಾರರೂ ಟಿಪ್ಪಣಿಕಾರರೂ ಮತ್ತು ಪ್ರೌಢ ಸಾಹಿತಿಗಳೂ ಬಂದು ಕೈಂಕರ್ಯದಿಂದ ಶ್ರೀ ಮಧ್ವಾಚಾರ್ಯರ ಸೇವೆಯನ್ನು ಲಿಖಿತ ಮೂಲಕ ಸಲ್ಲಿಸಿದರೂ ಶ್ರೀ ಮಧ್ವಾಚಾರ್ಯರ ಚರಿತ್ರೆ ಹೇಳತಕ್ಕ ಇನ್ನೊಂದು ಕೃತಿ ರಚನೆಗೆ ಮಾತ್ರ ಯಾರೂ ಕೈಹಾಕಲಿಲ್ಲ. ಇದೊಂದು ಅತ್ಯುತ್ತಮ ಮತ್ತು ಶ್ಲಾಘ್ಯಮನೋಧರ್ಮ. ಇದರಿಂದ ಸುಮಧ್ವವಿಜಯವು ಶ್ರೀಮದಾಚಾರ್ಯರ ಚರಿತ್ರೆ ತಿಳಿಸತಕ್ಕ ಪರಮ ಪ್ರಮಾಣ ಗ್ರಂಥವಾಯಿತು.

ಶ್ರೀಮದಾಚಾರ್ಯರ ಚರಿತ್ರೆಯನ್ನು ಕೂಲಂಕುಷವಾಗಿ ನಿಷ್ಪಕ್ಷಪಾತ ಬುದ್ಧಿಯಿಂದ ಮತ್ತು ದುರಭಿಮಾನ ತ್ಯಾಗಮಾಡಿ ಓದಿದರೆ ಒಡೆದು ಕಾಣುವದೇನಂದರೆ, ಪುರುಷನ ಅತ್ಯುತ್ತಮ ಗುಣಗಳೆಂದು ಯಾವವು ಪ್ರಸಿದ್ಧವಾಗಿವೆಯೋ ಅವೆಲ್ಲಕ್ಕೂ ಇವರು ಆಕರ; ಬುದ್ಧಿ, ಬಲ, ಯಶಸ್ಸು, ಧೈರ್ಯ, ನಿರ್ಭಯತ್ವ, ಅರೋಗತಾ, ಅಜಾಡ್ಯ, ವಾಕ್ಪಟುತ್ವ ಹರಿಭಕ್ತಿ ಇತ್ಯಾದಿ. ಅಷ್ಟೇ ಅಲ್ಲದೇ ಮಾನವ ಸಹಜವಾದ ಯಾವ ನ್ಯೂನತೆಗಳೂ ಇವರಲ್ಲಿ ಕಂಡು ಬರುವದೂ ಇಲ್ಲ.

ಅಲ್ಲಲ್ಲಿ ಕೆಲವರು ಶ್ರೀಮದಾಚಾರ್ಯರನ್ನು ಸಾಮಾನ್ಯ ವೇದಾಂತಿಗಳ ಗುಂಪಿನಲ್ಲಿ ಉಲ್ಲೇಖ ಮಾಡಿ ಹತ್ತರ ಕೂಡ ಹನ್ನೊಂದು ಎನ್ನುವಂತೆ ಇವರು ಬಾಲ್ಯದಲ್ಲಿ ಕೇವಲ ಕ್ರೀಡಾಪಟುವಾಗಿ ಕಾಲಕಳೆಯುತ್ತಿದ್ದರೆಂದೂ ಸನ್ಯಾಸಿಗಳಾದ ಕೆಲವು ದಿನದ ಪೂರ್ವ ಅವರ ಮನೋಪರಿವರ್ತನೆಯಾಗಿರಬೇಕೆಂದೂ ಆಗ ಅವರು ಕಂಡಲೆಲ್ಲ ನಮಸ್ಕಾರ ಮಾಡತೊಡಗಿದರೆಂದೂ ಸನ್ಯಾಸಾಶ್ರಮ ಆದ ಮೇಲೆ ಇವರು ವಿದ್ಯಾಭ್ಯಾಸ ಮಾಡಿದರೆಂದೂ ಬರೆದಿರುವದುಂಟು. ಇನ್ನು ಕೆಲವರು ಇವರು ಕ್ರಿಸ್ತ ಧರ್ಮದವರ ಪ್ರಭಾವಕ್ಕೊಳಗಾಗಿರಬೇಕೆಂದೂ ಇತ್ಯಾದಿಯಾಗಿ ಬರೆದಿರುವದುಂಟು. ಹೀಗೆ ಉಂಟೇ ಎಂದು ವಿಮರ್ಶಿಸಿ ತಿಳಿಯುವಾ.

ಇವರಿಗೆ ಪೂರ್ಣಪ್ರಜ್ಞ (ಪೂರ್ಣಬೋಧ) ಎಂಬ ಹೆಸರನ್ನು ಇವರ ಆಶ್ರಮ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷಾಚಾರ್ಯರು ಕೊಟ್ಟರು. ಆದರೆ ಇವರು ಶೈಶವಾವಸ್ಥೆಯಿಂದ ಈ ನಾಮಧೇಯವಿಡುವವರಿಗೆ ಮಾಡಿದ ಶಿಶು ಸಹಜ, ಬಾಲ ಸಹಜ ಚೇಷ್ಟಾಗಳಲ್ಲಿಯೂ ಪೂರ್ಣಪ್ರಜ್ಞತೆಯು ಕಂಡು ಬರುವದು. ಮುಂದಂತೂ ಸ್ಪಷ್ಟವಾಗಿಯೇ ಇದೆ.

ಶಿಶುವಾದಾಗ ಇಟ್ಟ ವಾಸುದೇವನೆಂಬ ನಾಮಧೇಯವೂ ಮತ್ತು ಸನ್ಯಾಸಾಶ್ರಮ ತೆಗೆದುಕೊಂಡ ಮೇಲೆ ಇಟ್ಟ ಪೂರ್ಣಪ್ರಜ್ಞರೆಂಬ ನಾಮಧೇಯವೂ ಇವರಿಗೆ ಕೇವಲ ರೂಢನಾಮವಾಗಿರದೇ ಅನ್ವರ್ಥಕ ನಾಮಧೇಯಗಳಾಗಿವೆ. ಪೂರ್ಣಪ್ರಜ್ಞ (ದಶಪ್ರಮತಿ) ಎಂಬ ಹೆಸರು ವೇದಮಂತ್ರ ಪ್ರಸಿದ್ಧವೆಂದು ಸುಮಧ್ವವಿಜಯಕಾರರು ವರ್ಣಿಸಿದ್ದಾರೆ.

ಗುಣಾನುರೂಪೋನ್ನತಿಪೂರ್ಣಬೋಧ

ಇತ್ಯಮುಷ್ಯನಾಮ ದ್ವಿಜವೃಂದವಂದಿತಃ।

ಉದಾಹರದದ್ಭೂರಿ ಯಶಾಹಿ ಕೇವಲಂ

ನಮಂತ್ರವರ್ಣಃ ಸ ಚ ಮಂತ್ರವರ್ಣಕಃ॥

ಇವರು ಶೈಶವಾವಸ್ಥೆಯಲ್ಲಿ ಬಾಲ್ಯದಲ್ಲಿ ಮಾಡಿದ ಸಕಲ ವಿಸ್ಮಯ ಚೇಷ್ಟೆಗಳೆಲ್ಲವೂ ಕೇವಲ ಆಕಸ್ಮಿಕವಾಗಿ ನಡೆದವುಗಳಲ್ಲ. ಪ್ರಜ್ಞಾಪೂರ್ಣವಾಗಿ ಮಾಡಿದ ಕೃತಿಗಳಿವು. ಜನಿಸಿದ ಮೇಲಿನ ಸಂಗತಿಗಳೊಂದೆಡೆ ಇರಲಿ. ಜನಿಸುವರೆಂಬ ಮುನ್ಸೂಚನೆಗಳು ಕೂಡ ಆದವು. ಸುಮಧ್ವವಿಜಯದಲ್ಲಿ ಕಾಣತಕ್ಕ ಕೆಳಗಿನ ಎರಡು ಸಂಗತಿಗಳು ಗಮನ ಸೆಳೆಯಿತ್ತವೆ

೧) ಶ್ರೀ ಅನಂತೇಶ್ವರನ ಜಾತ್ರೆಯಲ್ಲಿ ಒಬ್ಬನಲ್ಲಿ ಅನಂತೇಶ್ವರನು ಆವೇಶಮಾಡಿ ಗರುಡ ಕಂಬದ ಮೇಲೆ ನಟನಂತೆ ಕುಣಿದು ಸರ್ವರ ಚಿತ್ತಾಕರ್ಷಿಸಿ ಘೋಷಿಸಿದ್ದೇನೆಂದರೆ 'ಶೀಘ್ರದಲ್ಲಿಯೇ ಇಲ್ಲಿ ಭಗವಾನ್ ವಿಶ್ವಜ್ಞರು ಅವತರಿಸುತ್ತಾರೆ.'

"...... ವಿಶ್ವಜನೀನ ವೃತ್ತಿರ್ವಶ್ವಜ್ಞ ಏವ ಭಗವಾನ ಚಿರಾದಿಹೇತಿ॥"

೨) ಶ್ರೀಮದಾಚಾರ್ಯರು ಜನಿಸತಕ್ಕ ಕಾಲದಲ್ಲಿ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದವು. ಮತ್ತು ಆಗಿನ ಜನಗಳೆಲ್ಲರೂ ಕುತೂಹಲದಿಂದ ಕೇಳಿದರು. ಶ್ರೀ ಮಧ್ಯಗೇಹಭಟ್ಟರೂ ಕೇಳಿದರು.

".....ಸುರದುಂದುಭಿಮಂದ್ರಾನಾದಃ ಪ್ರಾಶ್ರಾವಿ

ಕೌತುಕವಶೈರಿಹಮಾನವೈಶ್ಚ॥"

ಇನ್ನು ಜನಿಸಿದ ಮೇಲಿನ ಘಟನೆಗಳು-

೩) ಶಿಶುವಾಗಿದ್ದಾಗ ಇವರನ್ನು ಶ್ರೀ ಅನಂತೇಶ್ವರನ ಗುಡಿಗೆ ಕರೆದುಕೊಂಡು ಹೋಗಿ ಮರಳಿ ಬರುವಾಗ ಒಂದು ಗ್ರಹವು ಒಬ್ಬನಲ್ಲಿ ಪ್ರವೇಶ ಮಾಡಿ "ಲೋಕೇಶ್ವರನಾದ ಈ ಮಗುವಿನ ಶಕ್ತಿ ರಕ್ಷಣೆ ಇಲ್ಲದೇ ಹೋಗಿದ್ದರೆ ಎಲ್ಲರನ್ನೂ ಮುಗಿಸಿಬಿಡಲು ಸಾಧ್ಯವಾಗುತ್ತಿತ್ತು". ಎಂದು ಹೇಳಿ ಅಂತರ್ಧಾನವಾಯಿತು.

"ಯಚ್ಛಕ್ತಿಗುಪ್ತಿರಹಿತಾನಲಮಸ್ಮಿಂಹಂತುಂ

ಲೋಕೇಶ್ವರಃ ಸಬತಬಾಲತಮಃಕಿಲೇತಿ॥"

ಈ ಶಿಶುವಿನ ಶಕ್ತಿಯನ್ನರಿತ ಪಿಶಾಚಿಗೆ ಭಯವಾದಾಗ ಶಿಶುವಿಗೆ ಆ ಶಕ್ತಿಯ ಅರಿವೇ ಇಲ್ಲವೆನ್ನುವದೆಂತು! ಅದರ ಪ್ರಜ್ಞೆ ಇದ್ದೇ ಇದೆ.

೪) ಅಕ್ಕನು ಇವರಿಗೆ ಹುರುಳಿ ತಿನಿಸಿದಾಗಲೂ ಅಷ್ಟೇ. ತಿಳಿಯದೆ ಅಷ್ಟು ಪ್ರಮಾಣ ಹುರುಳೀ ತಿಂದರೆ ಅಜೀರ್ಣವಾಗಬೇಕು. ಸಾಮಾನ್ಯ ಮಕ್ಕಳಿಗೆ ಎಷ್ಟೋ ಸಲ ಹಾಲೇ ಅಜೀರ್ಣವಾಗುತ್ತದೆ. ತಿಂದಷ್ಟು ಹುರುಳಿಯನ್ನು ಜೀರ್ಣ ಮಾಡಿಕೊಳ್ಳತಕ್ಕ ಸಾಮರ್ಥ್ಯದ ಪ್ರಜ್ಞಾ ಇರಲೇಬೇಕು. ಇಲ್ಲದೇ ಹೋದರೆ ಯುವಕರಿಗೂ ಅಸಾಧ್ಯವಾದ ಹುರುಳಿಯನ್ನು ಜೀರ್ಣಿಸುವದೆಂತು.

".........ಯೂನಾಂ ಚ ದುಸ್ಸಹಮಿದಂ

ಶಿಶುನೋಪಭುಕ್ತ್ಯಂ॥"

೫) ಒಂದು ವರ್ಷದವರಿದ್ದಾಗ ಹಸುವಿನ ಹಿಂದೆ ಕಾಡಿಗೆ ಹೋಗಿ ಬಂದದ್ದು ಹಾಗೆಯೇ ಅಜ್ಞಾನವಶದಿಂದಲ್ಲ. ನೈಜ ಸನ್ನಿವೇಶಗಳನ್ನು ನೆನೆದರೆ ಪ್ರಜ್ಞಾ ಪೂರ್ಣವಾಗಿಯೇ ಹೋಗಿ ಬಂದಿತು ಮಗು.

"..........ಏಕಾಬ್ದಿಕಂ ವೃಷಭವಾಲಕೃತಾವಲಂಬಂ"

೬) ಹಸುವನ್ನು ಕೊಳ್ಳಲು ಹಣ ಕೊಟ್ಟ ಸಾಲಗಾರನು ಒಂದಾನೊಂದು ದಿನ ಹಣವನ್ನು ಮರಳಿ ಕೊಡಬೇಕೆಂದು ಆಗ್ರಹ ಮಾಡಲು ಮಗುವು ಸಾಲವೆಷ್ಟಿತ್ತೋ ಅಷ್ಟು ಹುಣಸೇ ಬೀಜಗಳನ್ನು ಎಣಿಸಿ ಸಾಲಗಾರನಿಗೆ ಕೊಟ್ಟಿತು. ಸಾಲಗಾರನು ಅವುಗಳನ್ನು ಪಡೆದು ತನ್ನ ಸಾಲವು ಮುಟ್ಟಿತ್ತೆಂದು ತಿಳಿಸಿದನು. ಇದನ್ನು ನೋಡುತ್ತಿದ್ದ ಮಧ್ಯಗೇಹಭಟ್ಟರು ಕಾಲಾಂತರದಲ್ಲಿ ಹಣವನ್ನು ಕೊಡುವದಾಗಿ ಸೂಚಿಸಿದರೂ ಸಾಲಗಾರನು ನಿರ್ಧಾರಪೂರ್ವಕವಾಗಿ ತಮ್ಮ ಮಗನು ಕೊಟ್ಟನು. ಸಾಲವು ಸಂಪೂರ್ಣ ತೀರಿತೆಂದು ತಿಳಿಸಿದನು.

"ಲಬ್ಧಂ ಸುತಾದಿತಿ ವದನ್ ದ್ವಿಜಪುಂಗವೇನ

ಕಾಲಾಂತರೇ ನಿಜಧನಂ ಪ್ರತೀದಿತ್ಸಿತೇಪಿ"

ಸಾಲಗಾರನಿಗೆ ಅಂಥ ಅಪೂರ್ವ ತೇಜಸ್ವಿಯಾದ ಮಗುವನ್ನು ನೋಡಿದ್ದೇ ಸಾಕಾಯಿತು. ವರ್ಚಸ್ಸಿಗೆ ಹಣವು ಸಾಟಿಯೇ.

೭) ಚಿಕ್ಕವರಿದ್ದಾಗ ಮದುವೆಯ ಮನೆಯಿಂದ ಹೊರಟು ಕಾಡಿನಲ್ಲಿದ್ದ ಕಾನನ ದೇವರ ಗುಡಿಗೆ ಹೋಗಿ ಅಲ್ಲಿಂದ ಲಘುನಾರಿಕೇಳಿ ದೇವಸ್ಥಾನಕ್ಕೆ ಹೋಗಿ ಮುಂದೆ ರಜತಪೀಠ ಪುರದಲ್ಲಿರುವ ಅನಂತೇಶ್ವರನ ದೇವಸ್ಥಾನವನ್ನು ತಲುಪಿದರು. ತಂದೆಯು ಹುಡುಕುತ್ತಾ ಅಲ್ಲಿಗೆ ಬಂದು, ಯಾರು ಕರೆತಂದರೆಂದು ಕೇಳಿದರೆ ಶ್ರೀ ಅನಂತೇಶ್ವರನ ಕಡೆಗೆ ಕೈ ತೋರಿಸಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಆಕಸ್ಮಿಕವಾಗಿ ಕಾಡಿನಲ್ಲಿ ಒಬ್ಬರೇ ಹೊರಟರೆ ಭಯಗ್ರಸ್ತರಾಗಿ ಅಲ್ಲಿಯೇ ಅಳುತ್ತಾ ಕುಳಿತು ಕೊಳ್ಳಬೇಕು. ಸಂದರ್ಭ ಹಾಗಿಲ್ಲ. ಸಮಯ ಸಿಕ್ಕದ್ದರಿಂದ ಇವರು ಪ್ರಜ್ಞಾ ಪೂರ್ವಕವಾಗಿಯೇ ಆಯಾ ದೇವಸ್ಥಾನ ಸನ್ನಿಧಿಗಳಲ್ಲಿ ಹರಿ ನಮಸ್ಕಾರ ವ್ಯಾಜದಿಂದಲೇ ಹೋದರು ಎಂದು ಹೇಳಬೇಕಾಗುತ್ತದೆ.

೮) ಅಕ್ಷರಾಭ್ಯಾಸ ಸಮಯದಲ್ಲಿಯೂ ಇನ್ನೊಂದು ಚಿತ್ರಚರಿತ್ರೆ ಒಂದು ತರಹದ ವರ್ಣಗಳನ್ನು ಒಂದೇ ಸಲ ಹೇಳಬೇಕೆಂದು ಮಗನ ಆಗ್ರಹ. ಎರಡನೆಯ ಸಲ ಹೇಳಲು ಹೋದರೆ ತಂದೆಯ ಮೇಲೆ ಆಕ್ಷೇಪ

".........ಲಿಖಿತಮೇವ ಪುನರ್ಲಿಖಿತಂ ಕುತಃ"

೯) ಧೌತಪಟ ಶಿವಾಚಾರ್ಯರು ಪುರಾಣ ಹೇಳುತ್ತಿದ್ದಾಗ ಪುಟ್ಟ ವಾಸುದೇವನು ಮಧ್ಯದಲ್ಲಿಯೇ ಬಾಯಿಹಾಕಿ 'ಪೌರಾಣಿಕರೇ ತಪ್ಪು ಹೇಳುತ್ತಿದ್ದೀರಿ' ಎಂದು ಆಕ್ಷೇಪಿಸಿದರು "ಅಪರಥಾ ಕಥಿತಂ ಕಥಕತ್ವಯಾ" ಆಗ ಶ್ರೋತೃಗಳು ಮಗುವಿಗೆ 'ನೀನು ಹೇಳು' "ಅತ ಕಥಾಂ ಕಥಯ" ಎಂದು ಕೇಳಿದಾಗ ಸಮರ್ಪಕವಾಗಿ ಹೇಳಿ ಶ್ರೋತೃಗಳಿಗೆ ಆಶ್ಚರ್ಯ ಮತ್ತು ಆನಂದ ಬಡಿಸಿದರು. ಮನೆಗೆ ಬಂದು ತಂದೆಗೆ ನಡೆದ ವಾರ್ತೆ ತಿಳಿಸಿ ಶಿವಾಚಾರ್ಯರು ಹೇಳಿದ್ದು ಸರಿಯೇ ತಾನು ಹೇಳಿದ್ದು ಸರಿಯೇ ಎಂದು ಕೇಳಿದಾಗ ತಂದೆಯು ಮಗನ ಸಮರ್ಪಕ ಜ್ಞಾನಪೂರ್ವಕ ಉತ್ತರವನ್ನು ಕೇಳಿ ಸಂತೋಷಪಟ್ಟರು.

೧೦) ಮಧ್ಯಗೇಹಭಟ್ಟರು ಪುರಾಣ ಹೇಳುವ ಸಮಯದಲ್ಲಿ ಅನೇಕ ಶಾಖ ಪದಾರ್ಥಗಳ ಅರ್ಥ ಹೇಳುವಾಗ 'ಲಿಕುಚ' ಪದವು ಬಿಟ್ಟು ಹೋದದ್ದನ್ನು ತಿಳಿದ ವಾಸುದೇವನು ಬಿಟ್ಟುಹೋದ ಪದವನ್ನು ಮತ್ತು ಅದರ ಅರ್ಥ ಹೇಳಬೇಕಾಗಿಯೂ ತಂದೆಗೆ ಸೂಚಿಸಿದನು.

"........ಲಿಕುಚ ನಾಮ್ನಿ ತದಾ ನುದೀತಾರ್ಥಿಕೆ।

ಕಿಮಿತಿತಾತ ತದರ್ಥ ಮವರ್ಣಯನ್"

ತಂದೆಯು ಹೇಳಲಿಲ್ಲ. ಸುಮ್ಮನಿದ್ದರು. ಅದರ ಅರ್ಥವನ್ನು ವಾಸುದೇವನು ಹೇಳಿದನು. ಆಕಸ್ಮಿಕ (fluke) ಎನ್ನಲಾಗುವದೇ. ಪೂರ್ಣ ಜ್ಞಾನವಿರುವದು ಕಾಣುತ್ತದಲ್ಲ.

ಇನ್ನೂ ವಾಸುದೇವನನ್ನು ಗುರುಕುಲಕ್ಕೆ ಸೇರಿಸಿದ ಮೇಲೆ ಅಲ್ಲಿಯ ಚಿತ್ರ ಚರಿತ್ರೆಗಳು,

೧೧) ಜನರನ್ನು ಆಗಾಗ್ಗೆ ಭೀತಿಗೊಳಿಸುತ್ತಿದ್ದ ಸರ್ಪವೊಂದು ಇವರನ್ನು ಕಚ್ಚಲು ಧಾವಿಸಿದಾಗ ಅದನ್ನು ಕಾಲಬೆರಳಿನಿಂದ ಒರೆಸಿ ಹಾಕಿದರು.

೧೨) ಗುರುಕುಲದಲ್ಲಿ ಸಮವಯಸ್ಕರು ಮತ್ತು ಅಧಿಕ ವಯಸ್ಕರು ಮತ್ತು ಎಲ್ಲರ ಮಧ್ಯದಲ್ಲಿ ಸಕಲ ಆಟ ಪಾಟಗಳಲ್ಲಿಯೂ ಸ್ಪರ್ಧೆಗಳಲ್ಲಿಯೂ ಇವರೇ ಜಯಶೀಲರು.

೧೩) ಇವರು ವಿಳಂಬವಾಗಿ ತರಗತಿಗಳಿಗೆ ಹೋಗುವದು, ತರಗತಿಗಳಲ್ಲಿ ಅನ್ಯ ಮನಸ್ಕರಾಗಿರುವದನ್ನು ಕಂಡ ಗುರುಗಳು ಕೋಪಗೊಂಡು, ಆಕ್ಷೇಪಿಸಿ ಮೇಲಿನ ತರಗತಿಯ ವೇದಭಾಗವನ್ನು ಬುದ್ಧಿವಂತನಾದರೆ ಹೇಳಬೇಕೆಂದು ತಿಳಿಸಿದರು. ಗುರುಗಳ ಪ್ರಶ್ನೆಗೆ ಉತ್ತರವಾಗಿ ವೇದಗಳನ್ನು ಸ್ವರಪೂರ್ವಕವಾಗಿ ಲೋಪದೋಷಗಳಿಲ್ಲದೆ ಅತ್ಯಪೂರ್ವ ರೀತಿಯಲ್ಲಿ ಹೇಳಿ ತೋರಿಸಿದರು. ಇದೆಲ್ಲವೂ ಆಕಸ್ಮಿಕವಲ್ಲ. ಅಲ್ಲದೇ ಗುರುಗಳಿಗೂ ಗುರುದಕ್ಷಿಣಾ ರೂಪವಾಗಿ ಐತರೇಯ ಉಪನಿಷತ್ ತಿಳಿಸಿಕೊಟ್ಟರಂತೆ.

೧೪) ಸಹಪಾಠಿಯೊಬ್ಬ ಕಿವಿನೋವಿನಿಂದ ಬಹುಕಾಲ ಬಳಲುತ್ತಿದ್ದನು. ಅವನನ್ನು ಗುಪ್ತ ಜಾಗಕ್ಕೆಖರೆದುಕೊಂಡು ಹೋಗಿ ಮುಖವಾಯುವಿನಿಂದ ನೋವನ್ನು ಕಡಿಮೆಮಾಡಿದರು. ಗುರುಕುಲ ವಾಸಮುಗಿದ ನಂತರ-

೧೫) ಸನ್ಯಾಸ ತೆಗೆದು ಕೊಳ್ಳಬೇಕಾದಾಗಲೂ ತಂದೆ ತಾಯಿಗೂ ಮಗನಿಗೂ ಭಿನ್ನಾಭಿಪ್ರಾಯ ಬಂತು. ಆಗ ಇಬ್ಬರನ್ನು ಯುಕ್ತಿ ರೀತಿಯಲ್ಲಿ ಸಮಾಧಾನಗೊಳಿಸಿ ತಮಗೆ ಇನ್ನೊಬ್ಬ ತಮ್ಮ ಹುಟ್ಟುವನೆಂದು ಹೇಳಿ ಸನ್ಯಾಸಾಶ್ರಮಕ್ಕೆ ಪಡೆದರು. ಇದೇನೂ ಆಕಸ್ಮಿಕವಲ್ಲ. ಭವಿಷ್ಯತ್ ಜ್ಞಾನವಿದೆ. ಪ್ರಜ್ಞಾಪೂರ್ವಕ ದೃಢನಿರ್ಧಾರವಿದೆ. ಸುಮಧ್ವವಿಜಯದಲ್ಲಿ ವರ್ಣಿಸಿದ ಈ ಕುತೂಹಲ ಬಾಲ ಲೀಲೆಗಳು ಶ್ರೀ ಮಧ್ವಾಚಾರ್ಯರ ಆಜನ್ಮ ಪ್ರಜ್ಞಾ ಪೂರ್ಣತೆಯನ್ನು ವ್ಯಕ್ತಗೊಳಿಸುತ್ತವೆ. ಶ್ರೀನಾರಾಯಣ ಪಂಡಿತಾಚಾರ್ಯರು ಆನಂದಭರಿತರಾಗಿ ೪ನೇ ಸರ್ಗದ ಕೊನೆಯಲ್ಲಿ ಬಾಲಲೀಲೆಗಳ ಉಪ ಸಂಹಾರ ಮಾಡಿದ್ದಾರೆ.

"ಇತಿ ಬಹುವಿಧ ವಿಶ್ವಾಶ್ಚರ್ಯ ಚಿತ್ರಪ್ರವೃತ್ತೇ

ಜಗತಿವಿಶತಿ ಮಪನ್ನೂತ ನಾಪ್ಯಸ್ಯ ಕೀರ್ತಿಃ।

ಕ್ಷಪಿತತ ತತಮಸಾಕ್ಕ ಭಾಸ್ಕರೀವ ಪ್ರಭಾಲಂ

ಸುಜನ ಕುಮುದ ವೃಂದಾ ನಂದದಾಶ್ಚಂದ್ರಿಕೇವ॥

ಇನ್ನೂ ಪ್ರೌಢರಾದ ಮೇಲಿನ ಪೂರ್ಣಪ್ರಜ್ಞರ ಮುಂದಿನ ಕಥಾಭಾಗವು ಸುಮಧ್ವವಿಜಯದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ.

"ಧರ್ಮಸ್ವರೂಪತ್ವಾತ್ ಭೇದಸ್ಯ" ಎಂದು ಶ್ರೀಮದಾಚಾರ್ಯರ ಉಪದೇಶ. ಈ ಸೂತ್ರವನ್ನು ಇವರ ಚರಿತ್ರೆಗೆ ಅನ್ವಯಿಸಿದರೆ ಇವರ ಚರಿತ್ರೆಯು ಇತರರಿಂದ ಅತ್ಯಂತ ಭಿನ್ನವೂ ವಿಲಕ್ಷಣವೂ ಆಗಿದ್ದು ಪೂರ್ಣಪ್ರಜ್ಞರೆಂಬುದು ಧರ್ಮಿಯ ಸ್ವರೂಪದಿಂದಲೇ

ವ್ಯಕ್ತವಾಗುತ್ತದೆ. ಶೈಶವ ಬಾಲ್ಯಾವಸ್ಥೆಗಳಲ್ಲಿ ಮಾಡಿದ ಪ್ರಜ್ಞಾಪೂರ್ವಕ ವಿಸ್ಮಯ ಜನತ ಲೀಲೆಗಳು ಪ್ರೌಢರಾದ ಮೇಲೆ ಮುಂದೆ ನುಡಿದ ಸಂಭಾಷಣೆಗಳು ಉಪದೇಶಗಳು, ರಚಿಸಿದ ಗ್ರಂಥಗಳು, ವಾಗ್ವೈಖರಿಯು ವಾದ ವೈಖರಿಯು, ಸರ್ವತೋಮುಖ ನೆಲೆ ನಿಲುಕದ ಜ್ಞಾನವು ಮತ್ತು ಮನೋಹರ ಪೂರ್ಣಸುಂದರ ರೂಪವು ಇವೆಲ್ಲ ಲಕ್ಷಣಗಳಿಂದ ಇವರು ಪೂರ್ಣರು ಮತ್ತು ಪೂರ್ಣಪ್ರಜ್ಞರೆಂದೂ ಇವರನ್ನು ಸಾಮಾನ್ಯರಂತೆ ಗಣನೆ ಮಾಡಲು ಸಾಧ್ಯವಿಲ್ಲವೆಂದೂ ಆಗಿನ ಜನಗಳು ಅರಿತರು. ಯಾವ ದೇವಾಂಶ ಪುರುಷನಿರಬಹುದೆಂದೂ ಮತ್ತು ಈ ಸಕಲ ಲಕ್ಷಣಗಳು ಯಾವ ಲಕ್ಷ್ಯದಲ್ಲಿ ಸಮನ್ವಯವಾಗುವ ವೆಂದೂ ಜನರು ಊಹಿಸತೊಡಗಿದರು. ಕೊನೆಗೆ ಶ್ರೀಮದಾಚಾರ್ಯರ ಕರುಣೆಯಿಂದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ತಮ್ಮ ಹನುಮ, ಭೀಮ ಮತ್ತು ಮಧ್ವ ಈ ಮೂರು ರೂಪಗಳಿಂದ ಶ್ರೀ ರಾಮ, ಕೃಷ್ಣ ಮತ್ತು ವೇದವ್ಯಾಸರನ್ನು ಪೂಜಿಸುವದು ಕಾಣಿಸಿದಾಗ ಪುಳುಕಾಂಕಿತರಾದ ಸ್ಫೂರ್ತಿಯಲ್ಲಿ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು 'ವಾಯುಸ್ತುತಿ' ರಚನೆ ಮಾಡಿದರು. ಇದರಿಂದ ಇವರೇ ವಾಯುದೇವರ ಮೂರನೆಯ ಅವತಾರ "ಮಧ್ವಾಖ್ಯಂ ಮಂತ್ರಸಿದ್ಧಂ" ಎಂದು ಜನಜನಿತವಾಯಿತು. ಶ್ರೀ ಮಧ್ವಾಚಾರ್ಯರ ಅನುಯಾಯಿಗಳೆಲ್ಲರಲ್ಲೂ ಅಂದಿನಿಂದಲೂ ಈ ದಾರ್ಢ್ಯಜ್ಞಾನ ಬಲವಾಗಿ ನಿಂತಿದೆ.

ಸರ್ವ ಸಮರ್ಥರಾದ ಪೂರ್ಣಪ್ರಜ್ಞರು ಸಕಲ ಸಜ್ಜನರಿಗೆ ಶ್ರೀಹರಿ ಪ್ರೀತಿ ಸಾಧಕವಾದ ಜ್ಞಾನಭಕ್ತಿ ವೈರಾಗ್ಯಾದಿಗಳನ್ನು ಕರುಣಿಸಲಿ.

...................